# ಕೂರ್ಮಾವತಾರ ಚಿಂತನ

ಚಾಕ್ಷುಷ ಮನ್ವಂತರದಲ್ಲಿ ಪರಮಾತ್ಮನು ವೈರಾಜ ಋಷಿಯಿಂದ ಸಂಭೂತಿಯೆಂಬ ಪತ್ನಿಯಲ್ಲಿ ಅಜಿತನಾಮಕನಾಗಿ ಅವತರಿಸಿದನು ಅವನೇ ಸಮುದ್ರಮಥನ ಕಾರ್ಯ ಮಾಡಿ ದೇವತೆಗಳಿಗೆ ಅಮೃತವನ್ನು ಕೊಟ್ಟನು .

ಆಗ ಪರಿಕ್ಷಿದ್ರಾಜನು ಈ ಸಮುದ್ರಮಥನ ಕಥೆಯನ್ನು ವಿಸ್ತಾರವಾಗಿ ಹೇಳಬೇಕೆಂದು ಪ್ರಾರ್ಥಿಸಲು ಶ್ರೀಶುಕಾಚಾರ್ಯರು ಹೇಳಲು ಪ್ರಾರಂಭಿಸಿದರು .

ದುರ್ವಾಸ ಋಷಿಗಳ ಶಾಪದಿಂಧ ಇಂದ್ರದೇವರು ಸಂಪತ್ತಿನಿಂದ ರಹಿತರಾಗಿ ಬ್ರಹ್ಮದೇವರ ಹತ್ತಿರ ಬಂದು ತಮ್ಮ ಸ್ಥಿತಿಯನ್ನು ವಿವರಿಸಲು ಬ್ರಹ್ಮದೇವರು ಭಗವಂತನಿಗೆ ಶರಣು ಹೋಗಲು ತಿಳಿಸಿದರು .ಆಪ್ರಕಾರ ಎಲ್ಲ ದೇವತೆಗಳು ಭಗವಂತನ ವ್ಯಕ್ತಸ್ಥಾನವಾದ ಶ್ವೇತದ್ವೀಪಕ್ಕೆ ಹೋಗಿ ಸ್ತೋತ್ರಮಾಡಿದರು ದೇವತೆಗಳ ಸ್ತೋತ್ರದಿಂದ ಪ್ರಸನ್ನನಾದ ಭಗವಂತನು ಅವರಿಗೆ ಅಭಯ ನೀಡಿ **(**ಅರಯೋsಪಿ ಹಿ ಸಂಧೇಯಾ ಸತಿ ಕಾರ್ಯಾರ್ಥಗೌರವೇ**)** ದೈತ್ಯರ ಜೋತೆ ಸಂಧಾನ ಮಾಡಿಕೊಂಡು ಸಮುದ್ರಮಥನಮಾಡಲು ತಿಳಿಸಿದನು .

ಮಂದರ ಪರ್ವತವನ್ನು ಕಡೆಗೋಲನ್ನಾಗಿ ವಾಸುಕಿಯನ್ನು ಹಗ್ಗವನ್ನಾಗಿಮಾಡಿಕೊಂಡರು

ವರಾದ್ ಗೀರಿಶಸ್ಯ ಪರ್ರೈರಚಾಲ್ಯಮ್ |

ರುದ್ರದೇವರ ವರ ಮಂದರ ಪರ್ವತಕಿತ್ತು ಅದನ್ನು ಯಾರು ಅಲುಗಾಡಿಸಲು ಸಾಧ್ಯವಿರಲಿಲ್ಲ ಎಂಬ ವಿಶೇಷಾಂಶವನ್ನುಮಹಾಭಾರತ ತಾತ್ಪರ್ಯನಿರ್ಣಯದಲಿ ಜಗದ್ಗುರು ಶ್ರೀಮಧ್ವಾಚಾರ್ಯರು ತಿಳಿಸಿದ್ದಾರೆ

ಮೊದಲಿಗೆ ದೇವತೆಗಳು ಸನ್ನದ್ಧರಾಗಿ ಅಮೃತಕಾಗಿ ಅಮೃತಕ್ಕಾಗಿ ಮಥನಕ್ಕೆ ಹೊರಟರು ಶ್ರೀಹರಿ ವಾಸುಕಿಯ ಹೆಡೆಯನ್ನು ಹಿಡಿದುಕೊಂಡ ಅದರಿಂದ ದೇವತೆಗಳೆಲ್ಲರು ಹೆಡೆಯ ಭಾಗವನ್ನು ಹಿಡಿದು ನಿಂತರು ಆಗ ದೈತ್ಯರು ನಾವು ಅಮಂಗಲಕರವಾದ ಹಾವಿನ ಬಾಲದ ಭಾಗವನ್ನು ನಾವು ಹಿಡಿಯಲಾರೆವು ನಾವು ವೇದಾಧ್ಯಯನ ಶಾಸ್ತ್ರ ಸಂಪನ್ನರು ಒಳ್ಳೆಯಕುಲದಲ್ಲಿ ಹುಟ್ಟಿದವರು ಎನ್ನುತ್ತ ಶ್ರೀಹರಿಯು ಹೆಡೆಯಭಾಗವನ್ನು ಹಿಡಿದುದನ್ನು ಒಪ್ಪಲಿಲ್ಲ ಅವರು ಸುಮ್ಮನೆ ನಿಂತು

ದನ್ನು ನೋಡಿ ಶ್ರೀಹರಿ ನಸುನಗುತ್ತ ಹೆಡೆಯ ಭಾಗವನ್ನು ಬಿಟ್ಟು ದೇವತೆಗಳೊಂದಿಗೆ ಬಾಲದ ಭಾಗವನ್ನು ಹಿಡಿದ . ಹೀಗೆ ಕಶ್ಯಪರ ಸಂತತಿಗಳಾದ ದೇವದಾನವರು ಹಾವಿನ ಬಾಲ , ಹೆಡೆಭಾಗ ಸ್ಥಾನಗಳನ್ನು ವಿಭಾಗ ಮಾಡಿಕೊಂಡರು. ಸಮುದ್ರವನ್ನು ಕಡೆಯುತ್ತಿರಲು ಬೆಟ್ಟ ಆಧಾರವಿಲ್ಲದೆ ನೀರಲ್ಲಿ ಮುಳುಗಲು ತೊಡಗಿತು . ಬಲಿಷ್ಠರಾದ ದೇವ ದಾನವರು ಬೆಟ್ಟವನ್ನು ಮುಳುಗದಂತೆ ಹಿಡಿದಿದ್ದರೂ ಭಾರ ಹೆಚ್ಚಿದ್ದರಿಂದ ಅದು ಮುಳುಗತೊಡಗಿತು ಅತಿ ಬಲಿಷ್ಠವಾದ ದೈವದಿಂದ ತಮ್ಮ ಪೌರುಷ ಕೆಲಸಕ್ಕೆ ಭಾರದಂತಾಗಲೂ ಅವರು ಮನಸ್ಸಿನಲ್ಲಿ ತುಂಬಾ ಹತಾಶರಾದರು .

ಕೃತ್ವಾ ವಪುಃ ಕಾಚ್ಛಪಮದ್ಭುತಂ ಮಹತ್

ಪ್ರವಿಶ್ಯತೋಯಂ ಗಿರಿಮುಜ್ಜಹಾರ ||

ಆಗ ಪರಮಾತ್ಮನು ಅದ್ಭುತವಾದ ಕೂರ್ಮರೂಪವನ್ನು ಧರಿಸಿ ಮಹಾಜಲವನ್ನು ಹೊಕ್ಕು ಬೆಟ್ಟವನ್ನು ಬೆನ್ನಮೇಲೆ ಎತ್ತಿ ನಿಲ್ಲಿಸಿದ .

ಕೂರ್ಮಸ್ವರೂಪಕ ಮಂಧರದಾರೀನ್ ಲೋಕವಿಧಾರಕ ದೇವವರೇಣ್ಯ ||

-ದ್ವಾದಶಸ್ತೋತ್ರ

ಮಂದರ ಪರ್ವತ ಮೇಲೆ ಎದ್ದು ಬಂದುದನ್ನು ನೋಡಿ ದೇವದಾನವರು ಪುನಃ ಮಥನಮಾಡಲು ಎದ್ದುಬಂದರು ಇನ್ನೊಂದು ದೊಡ್ಡ ದ್ವೀಪದಂತಿರುವ ಕೂರ್ಮ ಲಕ್ಷಯೋಜನ ವಿಸ್ತಾರವಾದ ಬೆನ್ನಿನಿಂದ ಬೆಟ್ಟವನ್ನು ಹೊತ್ತುಕೊಂಡ

ಮಹಾ ಸುರಾಸುರರ ಭುಜಬಲದಿಂದ ಚಲಿಸುತ್ತ ತನ್ನ ಬೆನ್ನ ಮೇಲೆ ತಿರುಗುತಿದ್ದ ಆ ಬೆಟ್ಟವನ್ನು ಹೊತ್ತಾಗ ಆದಿಕೂರ್ಮ ರೂಪಿಯಾದ ಅಚಿಂತ್ಯ ಶಕ್ತಿ ಉಳ್ಳ ಶ್ರೀಹರಿ ಬೆಟ್ಟದಚಲನೆಯನ್ನು ಬೆನ್ನಿನ ನವೆಹೋಗಲಾಡಿಸುವ ಕೆರೆತದಂತೆ ಅನುಭವಿಸಿದ .

ಶ್ರೀಹರಿ ಅಸುರರಲ್ಲಿ ಅದರ ಬಲವೀರ್ಯಗಳನ್ನು ಪ್ರೇರಿಸಲು ಅಸುರರೂಪದಿಂದ ಅವಿಷ್ಟನಾದ

.ದೇವ ಸಮೂಹಗಳಲ್ಲಿ ದೇವರೂಪದಿಂದ ಅವಿಷ್ಟನಾದ .

ವಾಸುಕಿಯಲ್ಲೂ ಸರ್ಪರೂಪದಿಂದ ಅವಿಷ್ಟನಾದ . ಬೆಟ್ಟ ಮೇಲಕ್ಕೆ ಹಾರದಂತೆ ಸಹಸ್ರಬಾಹುವಾಗಿ ಇನ್ನೊಂದು ಬೆಟ್ಟದಂತೆ ನಿಂತು ಕೈಯಿಂದ ಬೆಟ್ಟವನ್ನು ಒತ್ತಿಹಿಡಿದುಕೊಂಡ ಬ್ರಹ್ಮರುದ್ರಇಂದ್ರ ಮುಂತಾದವರು ಅವನನ್ನು ಕೊಂಡಾಡಿದರು ಹೂಮಳೆಗರೆದರು .

ಶ್ರೀಮದ್ ಭಾಗವತ ಪುರಾಣದ ಅಷ್ಟಮ ಸ್ಕಂಧದಲ್ಲಿ ಕೂರ್ಮಾವತಾರದ ಮತ್ತು ಸಮುದ್ರ ಮಥನದ ವರ್ಣನೆ ವಿಸ್ತಾರವಾಗಿ ನಿರೂಪಿತವಾಗಿದೆ .

ಕ್ಷೀರೋದಧಾವಮರದಾನವಯೂಥಪಾನಾ

ಮುನ್ಮಥ್ನತಾಮಮೃತಲಬ್ಧಯ ಆದಿದೇವಃ |

ಪೃಷ್ಠೇನ ಕಚ್ಛಪ ರವಿದದಾರ ಗೋತ್ರಂ

ನಿದ್ರೇಕ್ಷಣೋದ್ರಿಪರಿವರ್ತಕಷಾಣಕಂಡೂಃ

ದೇವಾಸುರರು ಸೇರಿ ಅಮೃತಪ್ರಾಪ್ತಿಗಾಗಿ ಕ್ಷೀರಸಮುದ್ರಮಥನ ನಡೆಸುತ್ತಿದ್ದಾಗ ಮುಳುಗುತ್ತಿದ್ದ ಮಂಧರ ಪರ್ವತವನ್ನು ಹರಿ ಕೂರ್ಮರೂಪದಿಂದ ಬೆನ್ನ ಮೇಲೆ ಹೊತ್ತು ಬೆಟ್ಟ ಬೆನ್ನ ಮೇಲೆ ತಿರುಗಿದಾಗ. ಬೆನ್ನ ನವೆ ಕೆರೆದಂತಾಗಿ ನಿದ್ರೆಯಿಂದ ಅವನ ಅರ್ಧ ಮುಚ್ಚಿಕೊಂಡವು ಹೊರತು ಅವನಿಗೇನೂ ಶ್ರಮವಾಗಲಿಲ್ಲ .

-ಶ್ರೀಮದ್ಭಾಗವತ ಪುರಾಣ **2-7-13**

ಆದಿತ್ಯಪುರಾಣೋಕ್ತ ವೇಂಕಟೇಶಮಹಾತ್ಮೆಯಲ್ಲಿ ಕೂರ್ಮಾವತಾರ ವರ್ಣನೆ

ಮಹಾಗಾಧ ಜಲಾಧಾರಂ

ಕಚ್ಛಪಂ ಮಂದರೋದ್ಧರಮ್ |

ಸುಂದರಾಂಗಂ ಚ ಗೋವಿಂದ

ಶ್ರೀನಿವಾಸಂ ಭಜೇSನಿಶಮ್ ||

ಕೂರ್ಮರೂಪದಿಂದ ಬ್ರಹ್ಮಾಂಡದ ಜಲಾವರಣದ ಆಧಾರನು ಅಮೃತ ಮಥನಕ್ಕಾಗಿ ಕೂರ್ಮರೂಪನಾದರೂ ಸುಂದರಾಂಗನು ಮಂದರ ಹೊತ್ತರು ನಿರ್ವಿಕಾರನಾಗಿ ಕಾಂತಿಯುಕ್ತನಾದವನು ವೇದವೇದ್ಯನು ಆದ ಶ್ರೀನಿವಾಸನನ್ನು ಸರ್ವದಾ ಸೇವಿಸುವೆನು .

**-ಆದಿತ್ಯಪುರಾಣೋಕ್ತ ವೇಂಕಟೇಶಮಹಾತ್ಮ್ಯೆ 3-19**

ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಕೂರ್ಮಾವತಾರ ವರ್ಣನೆ

ಅಥಾತಿಭಾರದವಿಶತ್ ಸುಕಂಚನೋ ಗಿರಿಃ ಸ ಪಾತಲಮಥ ತ್ವಮೇವ |

ತಂ ಕಚ್ಛಾಪಾತ್ಮ ತ್ವಭರಃ ಸ್ವಪೃಷ್ಠೇ ಹ್ಯನನ್ಯಧಾರ್ಯಂ ಪುರುಲೀಲಯೈವ ||

ಸಮುದ್ರ ಮಥನ ನಡೆಯುವಾಗ ಅತಿಯಾದ ಭಾರದಿಂದ ಆ ಬಂಗಾರದ ಬೆಟ್ಟ ಕೆಳಗಿಳಿದು ಪಾತಾಲವನ್ನು ಪ್ರವೇಶಿಸಿತು ಆಗ ನೀನು ಬೇರೆಯವರಿಗೆ ಹೊರಲು ಅಶಕ್ಯವಾದ ಆ ಬೆಟ್ಟವನ್ನು ಅನಾಯಾಸದಿಂದ ಕೂರ್ಮರೂಪನಾಗಿ ಮಹಾಲೀಲೆಯಿಂದಲೇ ಹೊತ್ತುಕೊಂಡೆ .

ಮಹಾಭಾರತತಾತ್ಪರ್ಯನಿರ್ಣಯ **10 -11**

ಸುರಾಸುರಾಣಂಮದಧೀಂ ವಿಮಥ್ನತಾಂ
ದಧಾರ ಪೃಷ್ಠೇನ ಗಿರಿಂ ಸ ಮಂದರಮ್ |
ವರಪ್ರದಾನಾದಪರೈರಧಾರ್ಯಂ
ಹರಸ್ಯ ಕೂರ್ಮೋ ಬೃಹದಂಡವೋಢಾ ||

ದೇವತೆಗಳೂ ಅಸುರರೂ ಸೇರಿ ಸಮುದ್ರವವನ್ನು ಮಥಿಸುವಾಗ ಶ್ರೀಹರಿ ಕೂರ್ಮನಾಗಿ ಮಂದರಪರ್ವತವನ್ನು ಬೆನ್ನಿನಿಂದ ಧರಿಸಿದ .

ಆಪರ್ವತ ಶಿವವರದಿಂದ ಬೇರಾರಿಗೂ ಧರಿಸಲು ಅಶಕ್ಯವಾಗಿತ್ತು .ಆದರೆ ಕೂರ್ಮ ಧರಿಸಿದ .ಆ ಪರ್ವತ ರುದ್ರದೇವರ ವರದಿಂದ ಬೇರಾರಿಗೂ ಧರಿಸಲೂ ಅಶಕ್ಯವಾಗಿತ್ತು ಆದರೆ ಕೂರ್ಮರೂಪಿ ಪರಮಾತ್ಮ ಮಹಾ ಬ್ರಹ್ಮಾಂಡವನ್ನೇ ಹೊರುವವನು . ಅಂತಹ ಪರಮಾತ್ಮನು ಅನಾಯಾಸವಾಗಿ ಲೀಲೆಯಿಂದ ಮಂದರ ಪರ್ವತವನ್ನು ಧರಿಸಿದ .

ಮಹಾಭಾರತತಾತ್ಪರ್ಯನಿರ್ಣಯ **3-44**

ರುಕ್ಮಿಣೀಶವಿಜಯಮಹಾಕಾವ್ಯದಲ್ಲಿ ಕೂರ್ಮರೂಪ ವರ್ಣನೆ

ಭುಜಗದಿಕ್ಕರಿಭಾರಜಶೋಕಹೃತ್ |
ಸುರಮನೋರಥಪೂರಣಕಾರಣಃ ||

ಸ್ವಮತವಾರಿನಿಧೇರ್ಮಥನೇ ಪಟುಃ |

ಗಿರಿಧರೋಽರಿಧರೋಽಯಮಿಹಾಗತಃ ||

ಆದಿಶೇಷನಿಗೂ ದಿಗ್ಗಜಗಳಿಗೂ ಭೂಮಿ ಬೆಟ್ಟ ಮೊದಲಾದವುಗಳ ಭಾರದಿಂದ ಉಂಟಾದ ಶೋಕವನ್ನು ಪರಿಹರಿಸುವ, ದೇವತೆಗಳ ಅಮೃತಪಾನದ ಬಯಕೆಯನ್ನು ಪೂರೈಸಲು ಕಾರಣನಾದ, ತನಗೆ ಸಮ್ಮತವಾದ ಕ್ಷೀರಸಮುದ್ರಮಥನದಲ್ಲಿ ಸಮರ್ಥನಾದ, ಮಂದರ ಪರ್ವತವನ್ನು ಧರಿಸಿದ, ಚಕ್ರಪಾಣಿಯಾದ ಈ ಕೂರ್ಮರೂಪಿಯಾದ ಶ್ರೀಹರಿಯು ಈ ಕ್ಷೀರಸಮುದ್ರಪ್ರದೇಶಕ್ಕೆ ಬಂದವನಾದನು *

ಬೃಹದಾರಣ್ಯಕೋಪನಿಷದ್ಭಾಷ್ಯದಲ್ಲಿ ಕೂರ್ಮವತಾರ ವರ್ಣನೆ

ಬಿಭರ್ತ್ಯಂಡಂ ಹರಿಃ ಕೂರ್ಮಸ್ತ್ವಂಡೇ ಚಾಪ್ಯುದಕಂ ಮಹತ್ |

ಉದಕೇ ಕೂರ್ಮರೂಪಸ್ಯ ವಾಯುಃ ಪುಚ್ಛಂ ಸಮಾಶ್ರಿತಃ ||

ವಾಯೋಃ ಪುಚ್ಛಂ ಸಮಾಶ್ರಿತ್ಯ ಶೇಷಸ್ತು ಪೃಥ್ವೀಮಿಮಾಂ |

ಕೂರ್ಮರೂಪಿಯಾದ ಹರಿಯು ಬ್ರಹ್ಮಾಂಡವನ್ನು ಧರಿಸಿದ್ದಾನೆ ಬ್ರಹ್ಮಾಂಡದಲ್ಲಿ ಬಹಳ ಆಗಾಧವಾದ ನೀರಿದೆ . ಈ ಅಂಡೋದಕದಲ್ಲಿ ಕೂರ್ಮರೂಪಿಯಾಗಿ ಹರಿ ಇರುತ್ತಾನೆ . ಈ ಕೂರ್ಮರೂಪಿ ಹರಿಯ ಪುಚ್ಛವನ್ನು ವಾಯುಕೂರ್ಮನು ಆಶ್ರಯಿಸಿದ್ದಾನೆ .ವಾಯುಕೂರ್ಮದ ಪುಚ್ಛವನ್ನು ಧರಿಸಿ ಶೇಷನು ಬ್ರಹ್ಮಾಂಡದಲ್ಲಿ ಧರಿಸಿದ್ದಾನೆ ಬ್ರಹ್ಮಾಂಡದಲ್ಲಿ ಎಲ್ಲ ಜಗತ್ತನ್ನು ಧರಿಸಿದ್ದಾನೆ ಎಂದು ಜಗದ್ಗುರು ಶ್ರೀಮಧ್ವಾಚಾರ್ಯರು ಬೃಹದಾರಣ್ಯಕೋಪನಿಷದ್ಭಾಷ್ಯದಲ್ಲಿ ತಿಳಿಸಿದ್ದಾರೆ.

|| ಶ್ರೀಕೃಷ್ಣಾರ್ಪಣಮಸ್ತು ||